## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯಃ ಆರ್.ವಿ. ಡೆಂಟಲ್ ಕಾಲೇಜ್ ಬೆಂಗಳೂರು ಇದರ ಹೆಸರನ್ನು
" ಡಿ.ಎ. ಪಾಂಡು ಮೆಮೋರಿಯಲ್ ಆರ್. ವಿ. ಡೆಂಟಲ್
ಕಾಲೇಜ್ ಬೆಂಗಳೂರು " ಎಂದು ಬದಲಾಯಿಸುವ ಬಗ್ಗೆ

ಓದಲಾಗಿದೆ.

(೧) ತಾಃ 13.03.2006 ಸಂಖ್ಯೆಃ ಎಸಿಎಃಡಿ-11/0/10/2005-06ರ ರಿಜಿಸ್ಟ್ರಾರ್, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಇವರ ಪತ್ರ

(೨) ರಾಷ್ಟ್ರೀಯ ಶಿಕ್ಷಣ ಸಮಿತಿ ಟ್ರಸ್ಟ್, ಜಯನಗರ, ಬೆಂಗಳೂರು ಇಲ್ಲಿನ ಗೌರವ ಕಾರ್ಯದರ್ಶಿಯವರು ಮನವಿ ದಿಃ 14-03-2006

**ಪೀಠಿಕೆಃ**

ಮೇಲೆ ಓದಲಾದ (೧)ರ ದಿಃ 13-03-2006 ರ ಪತ್ರದಲ್ಲಿ ರಿಜಿಸ್ಟ್ರಾರ್, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಬೆಂಗಳೂರು ಇವರು ಆರ್.ವಿ. ಡೆಂಟಲ್ ಕಾಲೇಜು, ಬೆಂಗಳೂರು ಈ ಸಂಸ್ಥೆಯ ಹೆಸರನ್ನು " ಡಿ.ಎ. ಪಾಂಡು ಮೆಮೋರಿಯಲ್ ಆರ್.ವಿ. ಡೆಂಟಲ್ ಕಾಲೇಜ್ ಬೆಂಗಳೂರು" ಎಂದು ಬದಲಾಯಿಸಿಕೊಳ್ಳಲು ದಿಃ 25-02-2006 ರ ಸಿಂಡಿಕೇಟ್ ಸಭೆಯಲ್ಲಿ ನಿರ್ಣಯವನ್ನು ತೆಗೆದುಕೊಳ್ಳಲಾಗಿದೆ ಎಂದು ತಿಳಿಸಿರುತ್ತಾರೆ. ಅದರಂತೆ ಮೇಲೆ ಓದಲಾದ ರಾಷ್ಟ್ರೀಯ ಶಿಕ್ಷಣ ಟ್ರಸ್ಟ್, ಜಯನಗರ ಬೆಂಗಳೂರು ಇದರ ಗೌರವ ಕಾರ್ಯದರ್ಶಿಗಳು ಸರ್ಕಾರಕ್ಕೆ ದಿಃ 14-03-2006 ರಂದು ಮನವಿ ಸಲ್ಲಿಸಿ ಬೋರ್ಡ್ ಆಫ್ ಟ್ರಸ್ಟ್‌ನ ದಿಃ 18-12-2005 ರಂದು ಸಂಸ್ಥೆಯ ಹೆಸರನ್ನು ಮೇಲಿನಂತೆ ಬದಲಾಯಿಸಿಕೊಳ್ಳಲು ಸರ್ವಾನುಮತದಿಂದ ಒಪ್ಪಿಗೆ ನೀಡಿರುವುದರಿಂದ ಸದರಿ ಹೆಸರನ್ನು ಬದಲಾಯಿಸಿಕೊಳ್ಳಲು ಸರ್ಕಾರಿ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಸದರಿ ಪಸ್ತಾವನೆಯನ್ನು ಪರಿಶೀಲಿಸಿ ಅದರಂತೆ ಈ ಆದೇಶ.

**ಸರ್ಕಾರಿ ಆದೇಶ ಸಂಖ್ಯೆಃ ಆಕುಕ 113 ಎಂಪಿಎಸ್ 2006**
**ಬೆಂಗಳೂರು ದಿನಾಂಕ 04-04-2006**

ಪ್ರಸ್ತಾವನೆಯಲ್ಲಿ ಹೇಳಲಾದ ಅಂಶಗಳನ್ನು ಪರಿಗಣಿಸಿ " **ಆರ್.ವಿ. ಡೆಂಟಲ್ ಕಾಲೇಜ್ ಬೆಂಗಳೂರು** " ಇದರ ಹೆಸರನ್ನು " **ಡಿ.ಎ. ಪಾಂಡು ಮೆಮೋರಿಯಲ್ ಆರ್.ವಿ. ಡೆಂಟಲ್ ಕಾಲೇಜು, ಬೆಂಗಳೂರು** " ಎಂದು ಡೆಂಟಲ್ ಕೌನ್ಸಿಲ್ ಆಫ್ ಇಂಡಿಯಾ ರವರ ಅನುಮೋದನೆ ಪಡೆಯುವ ಷರತ್ತಿಗೆ ಒಳಪಟ್ಟು ಬದಲಾಯಿಸಿಕೊಳ್ಳಲು ಸರ್ಕಾರದ ಅನುಮತಿ ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ.

(ಡಿ.ಬಿ. ಗಣಾಚಾರಿ) 5/4/06
ಸರ್ಕಾರದ ಅಧೀನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ವೈದ್ಯಕೀಯ ಶಿಕ್ಷಣ)

ಇವರಿಗೆಃ

೨) ಮುಖ್ಯ ಆಡಳಿತಾಧಿಕಾರಿ, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು- 560 009

೩) ರಿಜಿಸ್ಟ್ರಾರ್, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, 4ನೆ ಬಿ ಬ್ಲಾಕ್,
ಜಯನಗರ, ಬೆಂಗಳೂರು 560 041

೪) ಗೌರವ ಕಾರ್ಯದರ್ಶಿಗಳು ರಾಷ್ಟ್ರೀಯ ಶಿಕ್ಷಣ ಸಮಿತಿ ಟ್ರಸ್ಟ್, ಆರ್.ವಿ. ಟೀಚರ್ಸ್ ಕಾಲೇಜ್ ಬಿಲ್ಡಿಂಗ್,
೨ನೇ ಬ್ಲಾಕ್ ಜಯನಗರ, ಬೆಂಗಳೂರು- ೫೬೦ ೦೧೧

5) The Secretary to Government , Ministry of Health & Family Welfare New Delhi-110 001.

6) The Secretary, Dental Council of India, Kotla Road, New Delhi-110011